# ವಿಂಬಲ್ಡನ್ ಅಂಗಳದಲ್ಲಿ ಮೈಸೂರಿನ ಸಾಗರ್!

■ ಗಿರೀಶ ದೊಡ್ಡಮನಿ
ಚಿತ್ರಗಳು: ಎಚ್.ಜಿ. ಪ್ರಶಾಂತ್







ಮೈಸೂರಿನ ಸಾಗರ್ ಸತ್ಯನಾರಾಯಣ ಕಶ್ಯಪ್ ಚಿಕ್ಕಂದಿನಲ್ಲಿ ಟೆನಿಸ್ ಆಡುವಾಗ ಹಲವು ಬಾರಿ ವಿಂಬಲ್ಡನ್ ಕನಸು ಕಂಡಿದ್ದಿದೆ. ಅದು ಒಂದರ್ಥದಲ್ಲಿ ನನಸಾಯಿತು ಕೂಡ. ಆಟಗಾರನಾಗಿ ಅವರು ವಿಂಬಲ್ಡನ್‌ಗೆ ಹೋಗಲಿಲ್ಲ. ಹೋಗಿದ್ದು ಲೈನ್ ಅಂಪೈರ್ ಆಗಿ. ಎರಡು ಬಾರಿ ವಿಂಬಲ್ಡನ್ ಅಂಗಳದಲ್ಲಿ ಆ ಕಾರ್ಯ ನಿರ್ವಹಿಸಿದ್ದಾರೆ. ಈಗ ಮೂರನೇ ಬಾರಿಯೂ ಹೊರಟಿದ್ದಾರೆ.

'ವಿಂಬಲ್ಡನ್ ಟೆನಿಸ್‌ನಲ್ಲಿ ಅಂಪೈರಿಂಗ್ ಮಾಡಿದ ಭಾರತದ ಅತ್ಯಂತ ಕಿರಿಯ ಲೈನ್ ಅಂಪೈರ್' ಎಂಬ ಹೆಗ್ಗಳಿಕೆಯಿರುವ ಮೈಸೂರಿನ 25ರ ಹರೆಯದ ಸಾಗರ್, 2010ರ ವಿಂಬಲ್ಡನ್‌ನ ಅರ್ಹತಾ ಸುತ್ತಿನಲ್ಲಿ ಮತ್ತು 2011ರಲ್ಲಿ ವಿಂಬಲ್ಡನ್ ಕ್ವಾರ್ಟರ್‌ಫೈನಲ್‌ನಲ್ಲಿ ಲೈನ್ ಅಂಪೈರ್ ಆಗಿದ್ದರು. ಕಳೆದ ವರ್ಷ ರಫೆಲ್ ನಡಾಲ್ ಆಡಿದ್ದ ಪಂದ್ಯದಲ್ಲಿ ಕಾರ್ಯ ನಿರ್ವಹಿಸಿದ ಅಪೂರ್ವ ಅನುಭವ ಇವರದ್ದು.

ಈಚೆಗೆ ಮೈಸೂರು ಟೆನಿಸ್ ಕ್ಲಬ್‌ನಲ್ಲಿ (ಎಂಟಿಸಿ) ನಡೆದ ಜುವಾರಿ ಗಾರ್ಡನ್ ಸಿಟಿ ಐಟಿಎಫ್ ಪುರುಷರ ಟೆನಿಸ್ ಟೂರ್ನಿಯಲ್ಲಿ ಅಂಪೈರ್ ಆಗಿ ಕೆಲಸ ಮಾಡಿದ ಸಾಗರ್ ಎರಡು ಸಂತಸದ ವಿಷಯಗಳನ್ನು ಹಂಚಿಕೊಂಡರು. ಒಂದು ತಾವು ಟೆನಿಸ್ ಆಟಗಾರನಾಗಿ ಬೆಳೆದ ಮೈಸೂರಿನ ಎಂಟಿಸಿಯಲ್ಲಿ ಅಂಪೈರಿಂಗ್ ಮಾಡುತ್ತಿರುವುದು ಮತ್ತು ಮುಂಬರಲಿರುವ ವಿಂಬಲ್ಡನ್ ಟೂರ್ನಿಯಲ್ಲಿ ಅಂಪೈರಿಂಗ್ ನಿರ್ವಹಿಸಲು ಹೊರಟಿರುವ ಬಗ್ಗೆ ಹೇಳಿದರು.

ಮೈಸೂರಿನಲ್ಲಿ ಉದ್ಯಮಿಯಾಗಿರುವ ತಂದೆ ಸತ್ಯನಾರಾಯಣ ಅವರು ಒಂಟಿಕೊಪ್ಪಲ್ ಕ್ಲಬ್‌ನಲ್ಲಿ ಪ್ರತಿನಿತ್ಯ ಟೆನಿಸ್ ಆಡುವುದನ್ನು ನೋಡಿ ಪ್ರಭಾವಿತನಾಗಿದ್ದ ಸಾಗರ್ ಟೆನಿಸ್ ರ‍್ಯಾಕೆಟ್ ಹಿಡಿದರು. ನಂತರ 12, 14, 16 ವರ್ಷದೊಳಗಿನ ವಿಭಾಗದ ರಾಷ್ಟ್ರೀಯ ಟೂರ್ನಿಗಳಲ್ಲಿ ಮಿಂಚಿದರು. ಉತ್ತಮ ಆಟಗಾರರಾಗಿದ್ದ ಸಾಗರ್ 18 ವರ್ಷದೊಳಗಿನವರ ವಿಭಾಗದಲ್ಲಿ ಭಾರತದ 50 ಅಗ್ರಶ್ರೇಯಾಂಕದ ಆಟಗಾರರಲ್ಲಿ ಒಬ್ಬರಾಗಿದ್ದರು. ಆದರೆ ಎಂಜಿನಿಯರಿಂಗ್ ಸೀಟು ಸಿಕ್ಕ ಮೇಲೆ ಟೆನಿಸ್ ಆಡುವುದನ್ನು ಬಿಟ್ಟರು. ಆದರೆ ಟೆನಿಸ್ ಪ್ರೀತಿ ಅವರನ್ನು ಬಿಡಲಿಲ್ಲ!

2005ರಲ್ಲಿ ದೆಹಲಿಯಲ್ಲಿ ಫೆಡ್ ಕಪ್ ಟೆನಿಸ್ ಟೂರ್ನಿ ಆಯೋಜಿಸಲಾಗಿತ್ತು. ಆಗ ಮೈಸೂರಿನ ವಿದ್ಯಾವಿಕಾಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಓದುತ್ತಿದ್ದ ಸಾಗರ್‌ಗೆ ಆಯೋಜಕರಿಂದ ಒಂದು ಇ–ಮೇಲ್ ಸಂದೇಶ ಬಂದಿತ್ತು. ಟೂರ್ನಿಯಲ್ಲಿ ಲೈನ್ ಅಂಪೈರ್‌ಗಳ ಅವಶ್ಯಕತೆ ಇದೆ. ಆಸಕ್ತಿಯಿದ್ದರೆ ಬನ್ನಿ ಎಂಬ ಆಹ್ವಾನವದು. ರಜೆಯೂ ಇದ್ದಿದ್ದರಿಂದ ಸಾಗರ್ ಟೂರ್ನಿಗೆ ಹೊರಟರು. ಅದು ಅವರ ಜೀವನಕ್ಕೆ ಹೊಸ ತಿರುವು ನೀಡಿದ ಪ್ರಯಾಣ. ರಜೆಗಳು ಸಿಕ್ಕಾಗಲೆಲ್ಲ ಟೂರ್ನಿಗಳಿಗೆ ಹೋಗಿ ಅಂಪೈರಿಂಗ್ ಮಾಡತೊಡಗಿದರು.

ಅವರು ಫೆಡ್ ಕಪ್ ಅಂಪೈರಿಂಗ್ ಅರ್ಹತೆ ಮೇಲೆ 2006ರಲ್ಲಿ ಐಟಿಎಫ್ ಲೆವೆಲ್–1 (ಅಂಪೈರಿಂಗ್) ಪರೀಕ್ಷೆ ಬರೆಯುವ ಅವಕಾಶ ಸಿಕ್ಕಿತು. ಅದರಲ್ಲಿ ಉತ್ತೀರ್ಣರಾದ ಅವರು, ಕೋಲ್ಕತ್ತದಲ್ಲಿ ನಡೆದ ಸನ್‌ಫೀಸ್ಟ್ ಟೆನಿಸ್ ಟೂರ್ನಿ, ಮುಂಬೈನ ಎಟಿಪಿ ಚಾಲೆಂಜರ್ ಟೂರ್ನಿಗಳಲ್ಲಿ ಕಾರ್ಯನಿರ್ವಹಿಸಿದರು. ಜೊತೆಗೆ ಹಲವು ಎಐಟಿಎ, ಐಟಿಎಫ್‌ಗಳಲ್ಲಿಯೂ ಕಾರ್ಯನಿರ್ವಹಿಸಿದರು.

ಮುಂದೆ 2008ರಲ್ಲಿ ಲೆವೆಲ್ –2 ಪರೀಕ್ಷೆ ಭಾರತದಲ್ಲಿ ನಡೆಯುವುದಿತ್ತು. ಆದ್ದರಿಂದ ಒಂದು ವರ್ಷ ಮುನ್ನವೇ ಅಖಿಲ ಭಾರತ ಟೆನಿಸ್ ಸಂಸ್ಥೆಯು ಪ್ರತಿಭಾವಂತ ಲೈನ್ ಅಂಪೈರ್‌ಗಳನ್ನು ಆಯ್ಕೆ ಮಾಡಿ, ತರಬೇತಿ ಆರಂಭಿಸಿತು. ಅದರಲ್ಲಿ ಸಾಗರ್ ಕೂಡ ಇದ್ದರು. ಪರೀಕ್ಷೆಗೂ ಮುನ್ನ ಇವರಿಗೆ ಒಂದಷ್ಟು ಟೂರ್ನಿಗಳಲ್ಲಿ ಅಂಪೈರಿಂಗ್ ಮಾಡುವ ಅವಕಾಶ ನೀಡಲಾಗಿತ್ತು. ಅಲ್ಲಿ ಇವರ ಪ್ರದರ್ಶನದ ಆಧರಿಸಿ ಪರೀಕ್ಷೆಗೆ ಪ್ರವೇಶ ನೀಡಲಾಯಿತು. ಅದರಲ್ಲಿಯೂ ಉತ್ತೀರ್ಣರಾದ ಸಾಗರ್ 'ಐಟಿಎಫ್ ವೈಟ್ ಬ್ಯಾಡ್ಜ್' ಪಡೆದ ಏಕೈಕ ಕನ್ನಡಿಗ.

'ಎಐಟಿಎ ಉತ್ತಮ ಮಾರ್ಗದರ್ಶನ ನೀಡುತ್ತಿದೆ. ಇದೇ ಮೊದಲ ಬಾರಿಗೆ ಮೈಸೂರಿನಲ್ಲಿ ಐಟಿಎಫ್ ನಡೆಯುತ್ತಿದೆ. ಬೇರೆ ಕಡೆ ಹೋಗುವ ಅವಕಾಶವನ್ನು ಬಿಟ್ಟು ಇಲ್ಲಿಗೆ ಬಂದಿದ್ದೇನೆ. ನಾನು ಆಡಿದ ನೆಲದಲ್ಲಿ ಕೆಲಸ ಮಾಡುವುದು ಸಂತಸದ ವಿಚಾರ. ಇದಾದ ನಂತರ ವಿಂಬಲ್ಡನ್, ತದನಂತರ ಯುರೋಪಿಯನ್ ಓಪನ್ ಟೂರ್ನಿಗೆ ಹೋಗಲು ಅವಕಾಶ ಸಿಕ್ಕಿದೆ' ಎಂದು ಸಂತಸದಿಂದ ಹೇಳುತ್ತಾರೆ.

ಇತ್ತೀಗಷ್ಟೇ ದಾಂಪತ್ಯ ಜೀವನಕ್ಕೆ ಕಾಲಿಟ್ಟಿರುವ ಸಾಗರ್, 'ನನ್ನ ಪತ್ನಿ ಮಾಧುರ್ಯ ಪ್ರಕಾಶ್, ತಾಯಿ ಮಂಜುಳಾ ಮತ್ತು ತಂದೆಯ ಸಂಪೂರ್ಣ ಬೆಂಬಲವಿದೆ. ಆಟಗಾರನಾಗಿ 30–35ನೇ ವಯಸ್ಸಿನವರೆಗೆ ಅಂಗಳದಲ್ಲಿ ಇರಬಹುದಿತ್ತು. ಆದರೆ ಅಂಪೈರ್ ಆಗಿರುವುದರಿಂದ ಇನ್ನೂ ಹೆಚ್ಚು ವರ್ಷಗಳ ಕಾಲ ಆಟದ ಅಂಗಳದಲ್ಲಿ ಇರಬಹುದು. ಉತ್ತಮ ಆದಾಯವೂ ಇದ್ದು, ಈ ವರ್ಷ ಅಥವಾ ಮುಂದಿನ ವರ್ಷದಲ್ಲಿ ಲೆವೆಲ್–3 ಪರೀಕ್ಷೆಯನ್ನು ಪಾಸ್ ಮಾಡುತ್ತೇನೆ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ. ●